**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಶೃಂಗೇರಿ</u>**

**<u>ಉಪಸ್ಥಿತರು</u>**

ಶ್ರೀ. ಸೂರ್ಯನಾರಾಯಣ ಎಸ್., ಬಿ.ಎ.ಎಲ್., ಎಲ್.ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಶೃಂಗೇರಿ.

**<u>ದಿನಾಂಕಃ</u>** 9 ನೇ ದಿವಸ ನವೆಂಬರ್ ಮಾಹೆ 2018.

**ಅಸಲು ದಾವೆ ಸಂಃ 62/2017**

**ವಾದಿ ಃ**

ಶ್ರೀಮತಿ. ಎನ್.ಎಸ್. ಗಾಯತ್ರಿ
ಬಿನ್ ಶ್ರೀನಿವಾಸಭಟ್ಟ,
ಕೋಂ ಎಸ್.ಕೆ. ಚೆನ್ನಕೇಶವ,
ವಯಸ್ಸು ಸುಮಾರು 60 ವರ್ಷ,
ವಾಸಃ ಫ್ಲಾಟ್ ನಂಃ206, ಡಿ.ಎಕ್ಸ್. ಮ್ಯಾಕ್ಸ್,
ಸನಸ್ಕೇಪ್, 8 ನೇ ಹಂತ, ಜೆ.ಪಿ.ನಗರ,
ಕೋತುನೂರು ಮುಖ್ಯ ರಸ್ತೆ,
ಬೆಂಗಳೂರು - 560078.

**ಃಃ ವಿರುದ್ಧ ಃಃ**

**ಪ್ರತಿವಾದಿಗಳು ಃ**

1. ಶ್ರೀಮತಿ ಶಶಿರೇಖ ಬಿನ್ ದಿಃ ಶೇಷಮ್ಮ,
   ಕೋಂ ರಮೇಶ,
   ವಯಸ್ಸು ಸುಮಾರು 56 ವರ್ಷ,
   ವಾಸಃ ಜ್ಞಾನಪ್ರಿಯ ನಿವಾಸ ಅಪಾರ್ಟ್ ಮೆಂಟ್,
   ಫ್ಲಾಟ್ ನಂಃ123, ಸಪ್ತಗಿರಿ ಕಾಲೇಜು ಹತ್ತಿರ,
   ಹೆಸರುಗಟ್ಟ ಮುಖ್ಯ ರಸ್ತೆ, ಬೆಂಗಳೂರು.

2. ಶ್ರೀ. ಶ್ರೀನಿವಾಸಮೂರ್ತಿ ಬಿನ್ ದಿಃ ಶೇಷಮ್ಮ,
   ವಯಸ್ಸು ಸುಮಾರು 53 ವರ್ಷ,
   ವಾಸಃ ಹೆಗ್ಗಾರುಕುಡಿಗೆ, ಅಗಳಗಂಡಿ ಗ್ರಾಮ,
   ಕೊಪ್ಪ ತಾಲ್ಲೂಕು.

3. ಶ್ರೀಮತಿ. ಗಿರಿಜಮ್ಮ ಬಿನ್ ಶಾಂತಲಕ್ಷ್ಮಮ್ಮ,
   ಕೋಂ ದಿಃ ಶ್ರೀನಿವಾಸಮೂರ್ತಿ,
   ವಾಸಃ ಶಿಡ್ಲೆ, ಭಾರತೀನಗರ ಅಂಚೆ,
   ಶೃಂಗೇರಿ ತಾಲ್ಲೂಕು.

4. ಶ್ರೀಮತಿ. ಲಲಿತಮ್ಮ ಬಿನ್ ಶಾಂತಲಕ್ಷ್ಮಮ್ಮ,
   ಕೋಂ ಲಕ್ಷ್ಮೀನಾರಾಯಣರಾವ್,
   ವಯಸ್ಸು ಸುಮಾರು 72 ವರ್ಷ,
   ವಾಸಃ ಹರೆ ಬಿಳಲು, ಸುಂಕದವಮಕ್ಕಿ ಗ್ರಾಮ,
   ಶೃಂಗೇರಿ ತಾಲ್ಲೂಕು.

5. ಶ್ರೀ. ವೆಂಕಟೇಶ್ ಭಟ್ ಬಿನ್ ದಿಃ ಶಾಂತಲಕ್ಷ್ಮಮ್ಮ,
   ವಯಸ್ಸು ಸುಮಾರು 70 ವರ್ಷ,
   ವಾಸಃ ಕಚ್ಚೋಡಿ, ತ್ಯಾವಣ ಅಂಚೆ,
   ಯಡದಾಳು ಗ್ರಾಮ, ಶೃಂಗೇರಿ ತಾಲ್ಲೂಕು.

6. ಶ್ರೀ. ನಾಗರಾಜ ಎನ್.ಎಸ್. ಬಿನ್ ದಿಃ ಶಾಂತಲಕ್ಷ್ಮಮ್ಮ,
ವಯಸ್ಸು ಸುಮಾರು 65 ವರ್ಷ,
ವಾಸಃ ನೆಮ್ಮಾರು, ಅಗ್ರಹಾರ,
ನೆಮ್ಮಾರು ಗ್ರಾಮ ಮತ್ತು ಅಂಚೆ, ಶೃಂಗೇರಿ ತಾಲ್ಲೂಕು.

7. ಶ್ರೀಮತಿ ಸುಮಿತ್ರ ಬಿನ್ ದಿಃ ಶಾಂತಲಕ್ಷ್ಮಮ್ಮ,
ಕೋಂ ನಾಗೇಶ್ ರಾವ್ (ಅರ್ಚಕರು)
ವಯಸ್ಸು ಸುಮಾರು 64 ವರ್ಷ,
ವಾಸಃ ಹೊರನಾಡು, ಅನ್ನಪೂರ್ಣೇಶ್ವರಿ ದೇವಸ್ಥಾನ,
ಮೂಡಿಗೆರೆ ತಾಲ್ಲೂಕು.

8. ಶ್ರೀಮತಿ ಅಪರ್ಣ ಬಿನ್ ದಿಃ ಶಾಂತಲಕ್ಷ್ಮಮ್ಮ,
ಕೋಂ ದಿಃ ಎ.ಎಸ್.ಗಣೇಶ್ ರಾವ್,
ವಯಸ್ಸು ಸುಮಾರು 62 ವರ್ಷ,
ವಾಸಃ ಅರಸಿ ತೋಟ, ಕಲ್ಕೆರೆ ಅಂಚೆ,
ಕೊಪ್ಪ ತಾಲ್ಲೂಕು.

9. ಶ್ರೀಮತಿ ಪಂಕಜಾ ಕೋಂ ದಿಃ ಕುಮಾರಸ್ವಾಮಿ,
ವಯಸ್ಸು ಸುಮಾರು 52 ವರ್ಷ,

10. ಶ್ರೀಮತಿ. ಅಕ್ಷತಾ ಬಿನ್ ದಿ. ಕುಮಾರಸ್ವಾಮಿ,
ವಯಸ್ಸು ಸುಮಾರು 26 ವರ್ಷ,

11. ಶ್ರೀ. ಬಾಲಸುಬ್ರಮಣ್ಯ ಬಿನ್ ದಿಃ ಕುಮಾರಸ್ವಾಮಿ,
ವಯಸ್ಸು ಸುಮಾರು 22 ವರ್ಷ,

ಪ್ರತಿವಾದಿ 9 ರಿಂದ 11 ರವರ ವಾಸಃ ಕಚ್ಚೋಡಿ,
ತ್ಯಾವಣ ಅಂಚೆ, ಯಡದಾಳು ಗ್ರಾಮ, ಶೃಂಗೇರಿ ತಾಲ್ಲೂಕು.

*****

## ಮಧ್ಯಂತರ ಅರ್ಜಿ ಸಂಖ್ಯೆಃ 1 ರ ಮೇಲೆ ಆದೇಶ

ವಾದಿಯು ಪ್ರಸ್ತುತ ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಹಾಗೂ ಕಲಂ 151 ರ ಪ್ರಕಾರ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, 5, 6 ಮತ್ತು 9 ನೇ ಪ್ರತಿವಾದಿಗಳಾಗಲೀ, ಸದರಿ ಪ್ರತಿವಾದಿಗಳ ಪ್ರತಿನಿಧಿಗಳಾಗಲಿ, ಅನುಯಾಯಿಗಳಾಗಲೀ, ದಾವಾ ಸ್ವತ್ತುಗಳನ್ನು ಮೂರನೇ ವ್ಯಕ್ತಿಗಳಿಗೆ ಮಾರಾಟ ಮಾಡದಂತೆ, ಯಾವುದೇ ಸಾಲವನ್ನು ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಾಡದಿರುವಂತೆ ಅಂತಿಮ ಆದೇಶ ಆಗುವವರೆಗೂ ನಿರ್ಬಂಧಕಾಜ್ಞೇಯ ಆದೇಶವನ್ನು ಹೊರಡಿಸಬೇಕೆಂದು ಕೋರಿರುತ್ತಾರೆ.

2. ವಾದಿಯು ತನ್ನ ಅರ್ಜಿಯ ಲಗತ್ತು ತನ್ನ ಅರ್ಜಿಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣಪತ್ರದಲ್ಲಿ ವಾದಿಯು ನಿವೇದಿಸಿಕೊಳ್ಳುವುದೇನೆಂದರೆ ವಾದಿ ಮತ್ತು ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬಕ್ಕೆ ಸೇರಿದವರಾಗಿದ್ದು, 1 ಮತ್ತು 2 ನೇ ಪ್ರತಿವಾದಿಗಳು ವಾದಿಯ ಅಕ್ಕನಾದ ದಿವಂಗತ ಶೇಷಮ್ಮನವರ ಮಕ್ಕಳಾಗಿದ್ದು, 3, 4, 7 ಮತ್ತು 8 ನೇ ಪ್ರತಿವಾದಿಗಳು ವಾದಿಯ ಅಕ್ಕಂದಿರಾಗಿದ್ದು, 5 ಮತ್ತು 6 ನೇ ಪ್ರತಿವಾದಿಗಳು ವಾದಿಯ ಅಣ್ಣಂದಿರಾಗಿದ್ದು, 9 ನೇ ಪ್ರತಿವಾದಿ ವಾದಿ ತಮ್ಮನ ಹೆಂಡತಿಯಾಗಿದ್ದು, 10 ಮತ್ತು 11 ಪ್ರತಿವಾದಿಗಳು ವಾದಿಯ ತಮ್ಮನ ಮಕ್ಕಳಾಗಿರುತ್ತಾರೆ. ದಾವಾ ಸ್ವತ್ತು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬಕ್ಕೆ ಸೇರಿದ ಸ್ವತ್ತುಗಳಾಗಿದ್ದು, ಮೂಲತಃ ಎನ್.ಕೆ.ಶ್ರೀನಿವಾಸಭಟ್ಟ ಬಿನ್ ಕೆ. ಕಾಳಭಟ್ಟ ರವರಿಗೆ ಸೇರಿದ ಸ್ವತ್ತುಗಳಾಗಿದ್ದು, ಸದರಿ ಶ್ರೀನಿವಾಸ ಭಟ್ಟ ರವರು ದಿಃ09/03/1974 ರಂದು ನಿಧನರಾಗಿದ್ದು, ಸದರಿಯವರು ನಿಧನ ಹೊಂದಿದ್ದ ನಂತರ ವಾದಿಯ ತಾಯಿ ಶ್ರೀಮತಿ ಶಾಂತಲಕ್ಷ್ಮಮ್ಮ ರವರು ದಾವಾ ಸ್ವತ್ತುಗಳ ಸಂಪೂರ್ಣ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದು, ಸದರಿ ವಾದಿಯ ತಾಯಿ ಶ್ರೀಮತಿ ಶಾಂತಲಕ್ಷ್ಮಮ್ಮ ರವರು ಸಹ ದಿಃ16/07/1999 ರಂದು ನಿಧನ ಹೊಂದಿರುತ್ತಾರೆ. ಸದರಿ ವಾದಿಯ ತಾಯಿ ನಿಧನ ಹೊಂದುವ ಪೂರ್ವದಲ್ಲಿ ವಾದಿಗೆ ಹಾಗೂ 1 ಮತ್ತು 2 ನೇ ಪ್ರತಿವಾದಿಗಳ ತಾಯಿಯಾದ ಶೇಷಮ್ಮ, 3, 4, 7 ಮತ್ತು 8 ನೇ ಪ್ರತಿವಾದಿಗಳಿಗೆ ತಿಳಿಯದಂತೆ ದಿಃ21/04/1980 ರಂದು 5, 6, 10 ಮತ್ತು 11 ನೇ ಪ್ರತಿವಾದಿಗಳ ತಂದೆಯವರಾದ ಕುಮಾರಸ್ವಾಮಿ ರವರ ಜೊತೆ ವಿಭಾಗಪತ್ರ ಮಾಡಿಕೊಂಡು, ಒಟ್ಟು ಕುಟುಂಬದ ಆಸ್ತಿಗಳನ್ನು ಶೃಂಗೇರಿಯ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಕೊಂಡಿದ್ದು, ಆ ಸಂದರ್ಭದಲ್ಲಿ ವಾದಿಯು ಅವಿವಾಹಿತಗಳಾಗಿ ತನ್ನ ತಾಯಿಯ ಜೊತೆಗೆ ಕುಟುಂಬದ ಸದಸ್ಯರ ಜೊತೆಯಲ್ಲಿಯೇ ವಾಸವಾಗಿದ್ದು, ವಾದಿಗೂ ಸಹ ದಾವಾ ಸ್ವತ್ತುಗಳಲ್ಲಿ ಸಮಾನವಾದ ಹಕ್ಕು ಇದ್ದು, ವಾದಿ ಮತ್ತು ವಾದಿಯ ಅಕ್ಕಂದಿರಿಗೆ ತಿಳಿಯದಂತೆ ಮೋಸ ಮಾಡುವ ದೃಷ್ಟಿಯಿಂದ ಮೇಲ್ಕಂಡ ನೊಂದಾಯಿತ ವಿಭಾಗಪತ್ರವನ್ನು ಮಾಡಿಕೊಂಡಿದ್ದು, ಆದುದರಿಂದ ಸದರಿ ವಿಭಾಗಪತ್ರವು ವಾದಿಯ ಹಕ್ಕಿಗೆ ಬದ್ದಪಡಿಸುವುದಿಲ್ಲ ಎಂದು ವಾದಿಗೆ ದಾವಾ ಸ್ವತ್ತುಗಳಲ್ಲಿ $^{1}/_{9}$ ನೇ ಭಾಗದ ಹಿಸ್ಸೆಯ ಹಕ್ಕಿದ್ದು, ಈ ಸಂಬಂಧ ವಾದಿಯು ಪ್ರತಿವಾದಿಗಳಲ್ಲಿ ತನ್ನ ಭಾಗದ ಹಿಸ್ಸೆಯನ್ನು ಕೊಡುವಂತೆ ಕೇಳಿಕೊಂಡಾಗ

ಪ್ರತಿವಾದಿಗಳು ದಾವಾ ಸ್ವತ್ತುಗಳ ಕೆಲವು ಆಸ್ತಿಗಳು ವಾದಿಯ ತಾಯಿಯ ಹೆಸರಿನಲ್ಲಿ ಇರುವುದರಿಂದ ತಾಯಿ ಹೆಸರು ಬದಲಾವಣೆ ಆದ ನಂತರ ದಾವಾ ಸ್ವತ್ತುಗಳಲ್ಲಿ ಆಸ್ತಿ ಭಾಗ ಕೊಡುವುದಾಗಿ ತಿಳಿಸಿದ್ದು, ಅಂತಿಮವಾಗಿ ವಾದಿಯು 5, 6,10 ಮತ್ತು 11 ನೇ ಪ್ರತಿವಾದಿಗಳ ತಂದೆಯವರನ್ನು ತನ್ನ ಹಿಸ್ಸೆಯ ಭಾಗವನ್ನು ನೀಡುವಂತೆ ಕೇಳಿಕೊಂಡಾಗ ಸದರಿ ಪ್ರತಿವಾದಿಗಳು 2017 ನೇ ಸಾಲಿನ ನವೆಂಬರ್ ತಿಂಗಳ ಅಂತ್ಯದೊಳಗಾಗಿ ಅಡಿಕೆ ಕಟಾವು ಮುಗಿದ ನಂತರ ವಾದಿಯ ಹಿಸ್ಸೆಯನ್ನು ಕೊಡುವುದಾಗಿ ಹೇಳಿ ನಂತರ ಒಂದಲ್ಲಾ ಒಂದು ನೆಪ ಹೇಳುತ್ತಾ ವಾದಿಗೆ ಕೊಡಬೇಕಾದ ಭಾಗವನ್ನು ಮುಂದೂಡುತ್ತಾ ಬಂದಿದ್ದು, ಈಗ ವಾದಿಗೆ ದಾವಾ ಸ್ವತ್ತುಗಳಲ್ಲಿ ಆಸ್ತಿಯ ಪಾಲನ್ನು ಕೊಡಬೇಕಾಗುತ್ತದೆ ಎಂಬ ಕಾರಣದಿಂದ ದಾವಾ ಸ್ವತ್ತುಗಳನ್ನು ಮಾರಾಟ ಮಾಡಲು ಹಾಗೂ ದಾವಾ ಸ್ವತ್ತುಗಳ ಮೇಲೆ ಸಾಲವನ್ನು ಪಡೆಯಲು ಪ್ರಯತ್ನಿಸುತ್ತಿರುತ್ತಾರೆ. ಒಂದು ವೇಳೆ 5, 6 ಹಾಗೂ ಇತರೇ ಪ್ರತಿವಾದಿಗಳು ದಾವಾ ಸ್ವತ್ತುಗಳನ್ನು ಮೂರನೇ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದಲ್ಲಿ ಅಥವಾ ಸಾಲ ಮಾಡಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟ ಉಂಟಾಗಲ್ಲಿದ್ದು, ಅದನ್ನು ಹಣದಿಂದ ಅಳೆಯಲು ಸಾಧ್ಯವಾಗುವುದಿಲ್ಲವಾದುದರಿಂದ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯಲ್ಲಿ ಕೇಳಿರುವ ಹಾಗೇ ಆದೇಶ ದಯಾಪಾಲಿಸಬೇಕಾಗಿ ಕೋರಿರುತ್ತಾರೆ.

3. ದಾವೆ ದಾಖಲಾದ ನಂತರ ಪ್ರತಿವಾದಿಗಳಿಗೆ ಸಮನ್ಸ್ ಹಾಗೂ ನೋಟಿಸ್ ಕಳುಹಿಸಲಾಗಿ 1 ರಿಂದ 4, 7 ಮತ್ತು 8 ನೇ ಪ್ರತಿವಾದಿಗಳು ಸಮನ್ಸ್ ಸ್ವೀಕರಿಸಿದ್ದರೂ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಸದರಿಯವರುಗಳ ವಿರುದ್ದ ಏಕಪಕ್ಷೀಯ ಆದೇಶ ಹೊರಡಿಸಲಾಗಿದ್ದು, 5, 6, 9 ರಿಂದ 11 ನೇ ಪ್ರತಿವಾದಿಯವರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಪ್ರತ್ಯೇಕವಾಗಿ ತಮ್ಮ ಪ್ರತಿವಾದ ಪತ್ರಗಳನ್ನು ಸಲ್ಲಿಸಿದ್ದು, ಸದರಿ ಪ್ರತಿವಾದ ಪತ್ರಗಳನ್ನೇ ಸದರಿ ಅರ್ಜಿಗೆ ತಕರಾರಾಗಿ ಪರಿಗಣಿಸಬೇಕೆಂದು ಮನವಿ ಸಲ್ಲಿಸಿದ್ದು, 5 ನೇ ಪ್ರತಿವಾದಿಯು ತಾನು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಗಳ ರಕ್ತಸಂಬಂಧವನ್ನು ಒಪ್ಪಿಕೊಂಡಿದ್ದು, ಇತರೇ ವಿಚಾರಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ. 5 ನೇ ಪ್ರತಿವಾದಿಯು ಪ್ರತಿಪಾದಿಸುವುದೇನೆಂದರೆ ವಾದಿಗೆ ದಾವಾ ಸ್ವತ್ತಿನಲ್ಲಿ $^1/_9$ನೇ ಭಾಗಾಂಶದ ಹಕ್ಕಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯ ತಂದೆ ನಿಧನರಾದ ನಂತರ 1980 ರ ಸಾಲಿನಲ್ಲಿಯೇ ನೊಂದಾಯಿತ ವಿಭಾಗಪತ್ರದ ಮೂಲಕ ವಿಭಾಗಪತ್ರ

ಮಾಡಿಕೊಂಡಿದ್ದು, ಸದರಿ ವಿಭಾಗಪತ್ರದಂತೆ ವಾದಿಯ ತಾಯಿ ಶಾಂತಲಕ್ಷ್ಮಮ್ಮರವರಿಗೆ ಸುಂಕದಮಕ್ಕಿ ಗ್ರಾಮದ ಸ.ನಂ.72 ಹಾಗೂ 58 ರಲ್ಲಿ ಜಮೀನು ಹೋಗಿದ್ದು, ಸದರಿ ಜಮೀನುಗಳಲ್ಲಿ ಸ.ನಂ.58 ರ ಜಮೀನನ್ನು ಶಾಂತಲಕ್ಷ್ಮಮ್ಮನವರು ಮಾರಾಟ ಮಾಡಿದ್ದು, ಸದರಿ ವಾದಿಯ ತಾಯಿ 1991 ರಲ್ಲಿ ನಿಧನರಾಗಿದ್ದು, ಸ.ನಂ.72 ರ ಖಾತೆಯು ತಾಯಿಯ ಹೆಸರಿನಲ್ಲಿಯೇ ಮುಂದುವರೆಯುತ್ತಿದ್ದು, ಅದೇ ರೀತಿ ವಾದಿಯ ಹಿರಿಯ ಸಹೋದರನಾದ ಕುಮಾರಸ್ವಾಮಿಯವರು ಸಹ ತನ್ನ ಭಾಗಕ್ಕೆ ಬಂದ ಜಮೀನನ್ನು ಮಾರಾಟ ಮಾಡಿರುತ್ತಾರೆ. ದಾವಾ ಐಟಂ ನಂ.2 ಮತ್ತು 3 ರ ಸ್ವತ್ತುಗಳನ್ನು ಖರೀದಿಸಿದವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ, ಆದುದರಿಂದ ದಾವಾ ಊರ್ಜಿತವಾಗುವುದಿಲ್ಲ. ಮುಂದುವರೆದು ವಾದಿ ಮತ್ತು ಪ್ರತಿವಾದಿಯ ತಂದೆಯ 1974 ರಲ್ಲಿಯೇ ತೀರಿಕೊಂಡಿರುವುದರಿಂದ ಸದರಿಯವರು ನಿಧನದ ಕ್ಷಣದಲ್ಲಿಯೇ ಸದರಿಯವರ ಕುಟುಂಬದ ಸದಸ್ಯರುಗಳಿಗೆ ಆಸ್ತಿಯ ಹಕ್ಕುಗಳು ತೆರೆದುಕೊಂಡಿದ್ದು, ಹಿಂದೂ ಮಿತಾಕ್ಷರ ಕಾನೂನಿನಂತೆ ಪ್ರತಿವಾದಿಯವರ ತಂದೆ ಶ್ರೀನಿವಾಸ ಭಟ್ಟ ಹಾಗೂ ಅವರ ಮಕ್ಕಳಾದ 6 ನೇ ಪ್ರತಿವಾದಿ ಹಾಗೂ ದಿವಂಗತ ಕುಮಾರಸ್ವಾಮಿ ರವರು ಮಾತ್ರ ಹಕ್ಕುಧಾರರಾಗಿದ್ದು, ಹೆಣ್ಣು ಮಕ್ಕಳಿಗೆ ಕುಟುಂಬದ ಆಸ್ತಿಗಳಲ್ಲಿ ಸಮಾನ ಹಕ್ಕಿರುವುದಿಲ್ಲ. ವಾದಿಯು ತಮ್ಮ ತಾಯಿಯ ಹೆಸರಿನಲ್ಲಿರುವ ಸ್ವತ್ತಿನಲ್ಲಿ ಮಾತ್ರ ತಮ್ಮ ಭಾಗಾಂಶದ ಹಕ್ಕನ್ನು ಪಡೆಯಲು ಅರ್ಹರಿರುತ್ತಾರೆಂದು ಮೇಲ್ಕಂಡ ಕಾರಣಗಳಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

4. 6 ನೇ ಪ್ರತಿವಾದಿಯು ತನ್ನ ವಕೀಲರ ಮೂಲಕ ಪ್ರತ್ಯೇಕ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, 6 ನೇ ಪ್ರತಿವಾದಿಯು ಸಹ ತನ್ನ ಹಾಗೂ ವಾದಿಯ ನಡುವೆ ಇರುವ ಸಂಬಂಧವನ್ನು ಹಾಗೂ ದಾವಾ ಸ್ವತ್ತುಗಳು ವಾದಿಯ ಮತ್ತು ಪ್ರತಿವಾದಿಯ ತಂದೆಗೆ ಸೇರಿದ ಸ್ವತ್ತಾಗಳಾಗಿರುತ್ತವೆ ಎನ್ನುವುದನ್ನು ಒಪ್ಪಿಕೊಂಡಿದ್ದರು ಸಹ ವಾದ ಪತ್ರದ ಇತರೇ ಅಂಶಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ. 6 ನೇ ಪ್ರತಿವಾದಿ ಪ್ರತಿಪಾದಿಸುವುದೇನೆಂದರೆ ತನ್ನ ತಂದೆ ತೀರಿಕೊಂಡ ನಂತರ ಪ್ರತಿವಾದಿಯ ತಾಯಿಯಾದ ಶಾಂತಲಕ್ಷ್ಮಮ್ಮರವರು ಕುಟುಂಬದ ಜವಾಬ್ದಾರಿಗಳನ್ನು ನಿರ್ವಹಿಸಿಕೊಂಡು ಬಂದಿದ್ದು, ಆನಂತರ ತಮ್ಮ ಮಕ್ಕಳ ಹಾಗೂ ಕುಟುಂಬದ ವಿಶ್ವಾಸಿಗಳು ಹಾಗೂ ಹಿತೈಷಿಗಳಲ್ಲಿ ಚರ್ಚಿಸಿ ಕುಟುಂಬಕ್ಕೆ ಸೇರಿದ ಆಸ್ತಿಗಳಲ್ಲಿ ಹೆಚ್ಚಿನ ಭಾಗವನ್ನು ತಮ್ಮ ಹಿಸ್ಸೆಗೆ ಇರಿಸಿಕೊಂಡು ಉಳಿಕೆ ಸ್ವತ್ತುಗಳನ್ನು ಅವರ

ಗಂಡು ಮಕ್ಕಳಾದ 5 ಮತ್ತು 6 ನೇ ಪ್ರತಿವಾದಿಗಳು ಹಾಗೂ 10 ಮತ್ತು 11 ಪ್ರತಿವಾದಿಗಳ ತಂದೆಯಾದ ಕುಮಾರಸ್ವಾಮಿ ಇವರುಗಳ ನಡುವೆ ವಿಭಾಗ ಮಾಡಿಕೊಂಡು, ಸದರಿ ವಿಭಾಗಪತ್ರವನ್ನು ದಿಃ21/04/1981 ರಂದು ಶೃಂಗೇರಿಯ ಉಪನೋಂದಣಾಧಿಕಾರಿ ಕಛೇರಿಯಲ್ಲಿ ನೊಂದಾವಣೆ ಮಾಡಿಸಿದ್ದು, ತದನಂತರ ಸದರಿ ನೊಂದಾಯಿತ ವಿಭಾಗಪತ್ರದ ಪ್ರಕಾರ 6 ನೇ ಪ್ರತಿವಾದಿ ತನ್ನ ಒಟ್ಟು ಕುಟುಂಬದಿಂದ ಪ್ರತ್ಯೇಕವಾಗಿ ವಾಸ ಮಾಡುತ್ತಾ ಬಂದಿದ್ದು, ಒಟ್ಟು ಕುಟುಂಬ ಆಸ್ತಿತ್ವದಲ್ಲಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಶ್ರೀಮತಿ ಶಾಂತಲಕ್ಷ್ಮಮ್ಮರವರು ಮರಣ ಹೊಂದಿದ ನಂತರ ಅವರ ಹಿಸ್ಸೆಗೆ ಬಂದಂತಹ ಸ.ನಂ.58 ರ ಜಮೀನನ್ನು 5 ನೇ ಪ್ರತಿವಾದಿ ಮತ್ತು 10 ಮತ್ತು 11 ನೇ ಪ್ರತಿವಾದಿಗಳ ತಂದೆಯಾದ ಕುಮಾರಸ್ವಾಮಿ ರವರು ತಮ್ಮ ಹೆಸರಿಗೆ ಅಕ್ರಮವಾಗಿ ವರ್ಗಾಯಿಸಿಕೊಂಡು ನೊಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಸದರಿ ಜಮೀನನ್ನು ವಾದಿಯು ದಾವೆಯಲ್ಲಿ ಸೇರಿಸಿರುವುದಿಲ್ಲ ಹಾಗೂ ಸದರಿ ಜಮೀನಿನ ಮಾಲೀಕರಾದವರನ್ನು ಸಹ ಪಕ್ಷಗಾರರಾಗಿ ಮಾಡಿರುವುದಿಲ್ಲ. ಆದುದರಿಂದ ದಾವೆಯು ಊರ್ಜಿತವಾಗುವುದಿಲ್ಲವೆಂದು, ಮುಂದುವರೆದು 6 ನೇ ಪ್ರತಿವಾದಿಯು ಸಹ ತನ್ನ ಹಿಸ್ಸೆಗೆ ಬಂದ ಸ.ನಂ.73 ಪಿ ಜಮೀನನ್ನು ಈಗಾಗಲೇ 1988-89 ನೇ ಇಸವಿಯಲ್ಲಿ ಮಾರಾಟ ಮಾಡಿದ್ದು, ಅದೇ ರೀತಿ ತನ್ನ ಇನ್ನೊಬ್ಬ ಸಹೋದರನಾದ ಕುಮಾರಸ್ವಾಮಿ ಸಹ ತನ್ನ ಭಾಗಕ್ಕೆ ಬಂದ ಸ.ನಂ.72 ಪಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ವಾದಿಗೆ ನೊಂದಾಯಿತ ಪತ್ರವಾಗಿರುವ ವಿಷಯ ಹಾಗೂ ಮೇಲ್ಕಂಡಂತೆ ಮಾರಾಟ ಮಾಡಿರುವ ವಿಷಯಗಳು ಗೊತ್ತಿದ್ದರು ಆ ಸಮಯದಲ್ಲಿ ಯಾವುದೇ ತಕರಾರು ಮಾಡದೇ ಈಗ ಸುಮಾರು 37 ವರ್ಷಗಳ ನಂತರ ಸುಳ್ಳು ಕಥೆ ಸೃಷ್ಟಿಸಿಕೊಂಡು ದಾವೆಯನ್ನು ಸಲ್ಲಿಸಿರುವ ಕಾರಣ ದಾವೆಯು ಕಾಲಪರಿಮಿತಿ ಅಧಿನಿಯಮದ ಪ್ರಕಾರ ಊರ್ಜಿತವಾಗುವುದಿಲ್ಲ ಎಂದು ಹಾಗೂ ವಾದಿಯು ಕಾನೂನಿನ ಪರಿಮಿತ ವ್ಯಾಪ್ತಿಯೊಳಗೆ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲ ಎಂದು, ಮೇಲ್ಕಂಡ ಎಲ್ಲಾ ಕಾರಣಗಳಿಂದ ವಾದಿಯು ಸಲ್ಲಿಸಿರುವ ಅರ್ಜಿಯನ್ನು ತೀರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

5. ಅರ್ಜಿ ಮತ್ತು ತಕರಾರಿನ ಸಂಗತಿಗಳನ್ನು ಪರಿಶೀಲಿಸಿದ ನಂತರ ಅರ್ಜಿಯ ನ್ಯಾಯೋಚಿತ ಇತ್ಯರ್ಥಕ್ಕಾಗಿ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

1. ವಾದಿಯು ಮೇಲ್ನೋಟಕ್ಕೆ ದಾವೆ ತನ್ನ ಪರವಾಗಿ ಇದೆ ಎಂದು ಸಾಬೀತುಪಡಿಸುವರೇ?
2. ಅನುಕೂಲತೆಯ ಒಲವು ವಾದಿ ಪರವಾಗಿದೆಯೇ?
3. ಪ್ರಸ್ತುತ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆಯೇ?
4. ಯಾವ ಆದೇಶ?

6. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶ ಸಂಖ್ಯೆ 1 ರಿಂದ 3ಃ ಭಾಗಶಃ ಸಕರಾತ್ಮಕವಾಗಿ

ಅಂಶ ಸಂಖ್ಯೆ 4ಃ ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಂದ

**ಕಾರಣಗಳು**

7. **ಅಂಶ ಸಂಖ್ಯೆಗಳು 1 ರಿಂದ 3 ಃ** ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ ವಿರುದ್ದ ದಾವಾ ಸ್ವತ್ತುಗಳಲ್ಲಿ ತನ್ನ ಕಾನೂನು ಬದ್ದ ಭಾಗಾಂಶವನ್ನು ಪಡೆಯಲು ಕೋರಿ ಸಲ್ಲಿಸಿದ್ದು, ವಾದಿಯು ವಾದಿಸುವುದೇನೆಂದರೆ ವಾದಿ ಮತ್ತು ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬಕ್ಕೆ ಸೇರಿದವರಾಗಿದ್ದು, ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬಕ್ಕೆ ಸೇರಿದ ಸ್ವತ್ತುಗಳಾಗಿರುತ್ತದೆ ಎಂದು, ಸದರಿ ಸ್ವತ್ತುಗಳು ವಾದಿ ತಂದೆಯಾದ ಎನ್.ಕೆ. ಶ್ರೀನಿವಾಸಭಟ್ಟ ಬಿನ್ ಎನ್ ಕಾಳಭಟ್ಟ ರವರಿಗೆ ಸೇರಿದ ಸ್ವತ್ತುಗಳಾಗಿದ್ದು, ಸದರಿಯವರು ದಿಃ09/03/1974 ರಂದು ನಿಧನ ಹೊಂದಿದ್ದು, ತದನಂತರ ವಾದಿಯ ತಾಯಿಯಾದ ಶಾಂತಲಕ್ಷ್ಮಮ್ಮರವರು ದಾವಾ ಸ್ವತ್ತುಗಳ ಸಂಪೂರ್ಣ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದು, ಸದರಿ ವಾದಿಯ ತಾಯಿಯಾದ ಶಾಂತಲಕ್ಷ್ಮಮ್ಮ, 5, 6 ಹಾಗೂ 10 ಮತ್ತು 11ನೇ ಪ್ರತಿವಾದಿಗಳ ತಂದೆಯಾದ ಕುಮಾರಸ್ವಾಮಿಯವರು ವಾದಿ ಹಾಗೂ ತಮ್ಮ ಕುಟುಂಬದ ಇತರೆ ಹೆಣ್ಣುಮಕ್ಕಳನ್ನು ಕೈಬಿಟ್ಟು ಸದರಿಯವರಿಗೆ ವಿಷಯವನ್ನು ತಿಳಿಸದೇ ದಿಃ21/04/1980 ರಂದು ನೊಂದಾಯಿತ ವಿಭಾಗಪತ್ರ ಮಾಡಿಕೊಂಡಿದ್ದು, ಸದರಿ ವಿಭಾಗಪತ್ರವು ವಾದಿಗೆ ತಿಳಿಯದೇ, ವಾದಿಯನ್ನು ಕೈಬಿಟ್ಟು ಮಾಡಿಕೊಂಡಿರುವುದರಿಂದ ವಾದಿಗೆ ಸದರಿ ವಿಭಾಗಪತ್ರ ಅನ್ವಯಿಸುವುದಿಲ್ಲ ಎಂದು, ಹಾಗೂ ವಾದಿಗೆ ದಾವಾ ಸ್ವತ್ತುಗಳಲ್ಲಿ ಸಮಾನವಾದ ಹಕ್ಕು ಇರುವುದರಿಂದ 5, 6 ಹಾಗೂ 10 ಮತ್ತು 11 ನೇ

ಪ್ರತಿವಾದಿಗಳ ತಂದೆಯವರನ್ನು ತನ್ನ ಭಾಗದ ಹಿಸ್ಸೆಯನ್ನು ನೀಡುವಂತೆ ಕೋರಿಕೊಂಡಾಗ ಸದರಿಯವರುಗಳು ತಾಯಿಯ ಹೆಸರಿನಲ್ಲಿ ದಾವಾ ಸ್ವತ್ತಿನ ಕೆಲವು ಆಸ್ತಿಯಿದ್ದು, ತಾಯಿ ಹೆಸರಿನಿಂದ ಆಸ್ತಿ ಬದಲಾವಣೆ ಆದ ನಂತರ ಆಸ್ತಿ ಭಾಗ ಕೊಡುವುದಾಗಿಯೂ ಹಾಗೂ 2017 ನೇ ಸಾಲಿನ ನವೆಂಬರ್ ತಿಂಗಳ ಅಂತ್ಯದೊಳಗಾಗಿ ಅಡಿಕೆ ಕಟಾವು ಮುಗಿದ ನಂತರ ಭಾಗ ನೀಡುವುದಾಗಿ ಹೇಳಿ ವಾದಿಗೆ ಒಂದಲ್ಲಾ ಒಂದು ನೆಪ ಹೇಳುತ್ತಾ ವಾದಿಗೆ ನೀಡಬೇಕಾದ ಹಿಸ್ಸೆಯನ್ನು ನೀಡದೇ ಮುಂದೂಡುತ್ತಾ ಬಂದಿದ್ದು, ವಾದಿಯು ತಾಯಿಯು ಸಹ ಮೃತಪಟ್ಟಿದ್ದು, ಪ್ರತಿವಾದಿಗಳು ವಾದಿಗೆ ದಾವಾ ಸ್ವತ್ತುಗಳಲ್ಲಿ ಇರುವ ಕಾನೂನು ಬದ್ದ ಭಾಗಾಂಶವನ್ನು ತಪ್ಪಿಸುವ ಸಲುವಾಗಿ ದಾವಾ ಸ್ವತ್ತುಗಳನ್ನು ಮಾರಾಟ ಮಾಡುವ ಹಾಗೂ ಸಾಲವನ್ನು ಮಾಡಲು ಪ್ರಯತ್ನಿಸುತ್ತಿದ್ದು, ಒಂದು ವೇಳೆ ಪ್ರತಿವಾದಿಗಳು ತಮ್ಮ ಸದರಿ ಕೃತ್ಯದಲ್ಲಿ ಸಫಲರಾದರೆ ವಾದಿಗೆ ತುಂಬಲಾರದ ತೊಂದರೆ ಹಾನಿಯುಂಟಾಗುತ್ತದೆ ಎಂದು ಅದನ್ನು ಹಣದಿಂದ ಅಳೆಯಲು ಸಾಧ್ಯವಾಗುವುದಿಲ್ಲವಾದುದರಿಂದ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ, ದಾವೆ ಇತ್ಯರ್ಥವಾಗುವವರೆಗೂ ಪ್ರತಿವಾದಿಗಳು ದಾವಾ ಸ್ವತ್ತುಗಳನ್ನು 3 ನೇ ವ್ಯಕ್ತಿಗಳಿಗೆ ಮಾರಾಟ ಮಾಡದಂತೆ ಹಾಗೂ ದಾವಾ ಸ್ವತ್ತುಗಳ ಮೇಲೆ ಸಾಲ ಮಾಡದಂತೆ ಆದೇಶಿಸಬೇಕೆಂದು ಕೋರಿಕೊಂಡಿರುತ್ತಾರೆ.

8. ದಾವೆಯನ್ನು ದಾಖಲಿಸಿದ ನಂತರ ಪ್ರಸ್ತುತ ದಾವೆಯಲ್ಲಿ 9 ನೇ ಪ್ರತಿವಾದಿಯು ಮೃತಪಟ್ಟಿದ್ದು, ಸದರಿಯವರ ವಾರಸುದಾರರಾಗಿ 10 ಮತ್ತು 11 ನೇ ಪ್ರತಿವಾದಿಗಳು ಈಗಾಗಲೇ ಪಕ್ಷಗಾರರಾಗಿರುವುದರಿಂದ 9 ನೇ ಪ್ರತಿವಾದಿಯ ಮೇಲೆ ಪ್ರಸ್ತುತ ದಾವೆಯನ್ನು ವಜಾ ಮಾಡಲಾಗಿದೆ.

9. 5 ಮತ್ತು 6 ನೇ ಪ್ರತಿವಾದಿಗಳ ತಕರಾರಿನ ಸಾರಾಂಶ ಏನೆಂದರೆ, ವಾದಿ ಹೇಳಿದಂತೆ ಒಟ್ಟು ಕುಟುಂಬ ಆಸ್ತಿತ್ವದಲ್ಲಿರುವುದಿಲ್ಲ. ದಿಃ21/04/1980 ರಂದು ಕುಟುಂಬದ ಹಿರಿಯರ ಮತ್ತು ಹಿತೈಷಿಗಳ ಮಾತಿನಂತೆ ವಾದಿಯ ತಾಯಿ, 5, 6 ನೇ ಪ್ರತಿವಾದಿ ಹಾಗೂ 10 ಮತ್ತು 11 ನೇ ಪ್ರತಿವಾದಿಗಳ ತಂದೆಯ ನಡುವೆ ನೊಂದಾಯಿತ ವಿಭಾಗಪತ್ರವಾಗಿದ್ದು, ವಾದಿಯ ತಾಯಿ ತನ್ನ ಹೆಣ್ಣು ಮಕ್ಕಳ ಹಕ್ಕಿನ ಬಾಬ್ತಾಗಿ ಕುಟುಂಬದ ಆಸ್ತಿಯಲ್ಲಿ ಹೆಚ್ಚಿನ ಜಮೀನನ್ನು ತನ್ನ ಬಳಿ ಇಟ್ಟುಕೊಂಡು ಉಳಿದ ಜಮೀನುಗಳನ್ನು 5, 6 ಹಾಗೂ 10 ಮತ್ತು 11 ನೇ ಪ್ರತಿವಾದಿಗಳ ತಂದೆಗೆ ನೊಂದಾಯಿತ

ವಿಭಾಗಪತ್ರದ ಮೂಲಕ ಹಂಚಿದ್ದು, ಸದರಿ ವಿಭಾಗಪತ್ರದಂತೆ ಪ್ರತಿವಾದಿಗಳು ತಮ್ಮಗಳ ಹೆಸರಿಗೆ ಖಾತೆಯನ್ನು ವರ್ಗಾಯಿಸಿಕೊಂಡು ಸುಮಾರು 37 ವರ್ಷಗಳಿಂದ ಸ್ವಾಧೀನದಲ್ಲಿದ್ದು, ಸದರಿ ನೊಂದಾಯಿತ ವಿಭಾಗಪತ್ರದ ವಿಷಯವು ವಾದಿಗೆ ತಿಳಿಸಿಯೇ, ವಾದಿಯ ಗಮನಕ್ಕೆ ಬಂದಂತೆ ನೊಂದಾಯಿಸಲಾಗಿರುತ್ತದೆ. ಪ್ರಸ್ತುತ ವಾದಿಯು ಸದರಿ ವಾಸ್ತವಾಂಶವನ್ನು ಮರೆಮಾಚಿ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತಾರೆಂದು ವಾದಿಗೆ ತನ್ನ ತಾಯಿಯ ಭಾಗಕ್ಕೆ ಬಂದ ಹಿಸ್ಸೆಯಲ್ಲಿ ಮಾತ್ರ ಭಾಗಾಂಶ ಪಡೆಯುವ ಹಕ್ಕಿದ್ದು, ವಾದಿಗೆ ಸಮಭಾಗದ ಹಕ್ಕಿರುವುದಿಲ್ಲವೆಂದು ಪ್ರತಿಪಾದಿಸಿರುತ್ತಾರೆ. 6 ನೇ ಪ್ರತಿವಾದಿ ಮುಂದುವರೆದು ನೊಂದಾಯಿತ ವಿಭಾಗಪತ್ರದಂತೆ ಖಾತೆಗಳು ಬದಲಾಗಿದ್ದು, ಪ್ರಸ್ತುತ ತನ್ನ ಭಾಗಾಂಶಕ್ಕೆ ಬಂದ ಸ್ವತ್ತುಗಳಲ್ಲಿ 6 ನೇ ಪ್ರತಿವಾದಿ ಹಾಗೂ 10 ಮತ್ತು 11 ನೇ ಪ್ರತಿವಾದಿಗಳ ತಂದೆಯಾದ ಕುಮಾರಸ್ವಾಮಿ ರವರು ಕ್ರಮವಾಗಿ ಸ.ನಂ.72/ಪಿ ರಲ್ಲಿ ಬಂದ ಸ್ವತ್ತುಗಳನ್ನು ಮಾರಾಟ ಮಾಡಿದ್ದು, ವಾದಿಯ ತಾಯಿಯ ಹೆಸರಿನಲ್ಲಿ ಖಾತೆಯಿದ್ದ ಸ.ನಂ.58 ನ್ನು ಶಾಂತಲಕ್ಷ್ಮಮ್ಮರವರ ಪೌತಿ ಸಬೂಬು 5 ಮತ್ತು 10 ಮತ್ತು 11 ನೇ ಪ್ರತಿವಾದಿಗಳ ತಂದೆರವರು ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡು ಮಾರಾಟ ಮಾಡಿದ್ದು, ಸದರಿ ವಿಷಯಗಳೆಲ್ಲವು ವಾದಿಗೆ ಗೊತ್ತಿದ್ದರೂ, ವಾದಿಯು ಸದರಿ ಸ.ನಂ.58 ನ್ನು ದಾವಾ ಶೆಡ್ಯೂಲ್ ಸ್ವತ್ತಿಗೆ ಸೇರಿಸದೇ ಹಾಗೂ ಅವಶ್ಯಕ ಪಕ್ಷಗಾರರನ್ನು ಪಕ್ಷಗಾರರನ್ನಾಗಿ ಮಾಡದೇ ಸಲ್ಲಿಸಿರುವ ಪ್ರಸ್ತುತ ದಾವೆಯು ಊರ್ಜಿತವಾಗುವುದಿಲ್ಲ. ಆದುದರಿಂದ ಅರ್ಜಿಯನ್ನು ತೀರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

10. ವಾದಿ ತನ್ನ ನಿಲುವನ್ನು ಸಮರ್ಥಿಸಲು ಈ ಹಂತದಲ್ಲಿ ತನ್ನ ತಂದೆ, ತಾಯಿ ಹಾಗೂ ಮೃತ ಕುಮಾರಸ್ವಾಮಿ ರವರ ಮರಣ ಪ್ರಮಾಣ ಪತ್ರ, ವಂಶವೃಕ್ಷ, ವಿಭಾಗಪತ್ರದ ದೃಡೀಕೃತ ನಕಲು, ಹಕ್ಕು ಬದಲಾವಣೆ ವಹಿ, ದಾವಾ ಸ್ವತ್ತುಗಳ ಪಹಣಿ ಹಾಗೂ ಋಣಬಾರ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತಾರೆ. 5 ನೇ ಪ್ರತಿವಾದಿ ತನ್ನ ನಿಲುವನ್ನು ಸಮರ್ಥಿಸಲು ಈ ಹಂತದಲ್ಲಿ ದಾವಾ ಸ್ವತ್ತುಗಳ ಹಾಗೂ ಸ.ನಂ.58/1, 98, 99, 100 ರ ಪಹಣಿಗಳನ್ನು ಹಾಜರುಪಡಿಸಿದ್ದು, 6 ನೇ ಪ್ರತಿವಾದಿಯು ವಿಭಾಗಪತ್ರದ ದೃಡೀಕೃತ ನಕಲು, ಹಕ್ಕು ಬದಲಾವಣೆ

ವಹಿ, ಪಹಣಿಗಳ ದೃಡೀಕೃತ ನಕಲು, ದಿಃ21/02/1994 ರಂದು ಆದ ಕ್ರಯಪತ್ರ ಹಾಗೂ 2017-18 ನೇ ಸಾಲಿನ ಸ.ನಂ.58 ರ ಪಹಣಿಯನ್ನು ಹಾಜರುಪಡಿಸಿರುತ್ತಾರೆ.

11. ಅರ್ಜಿ ಹಾಗೂ ತಕರಾರಿನ ಸಂಗತಿಗಳು ಹಾಗೂ ಈ ಹಂತದಲ್ಲಿ ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ವಾದಿ ಮತ್ತು ಪ್ರತಿವಾದಿಗಳೆಲ್ಲಾ ಒಟ್ಟು ಕುಟುಂಬಕ್ಕೆ ಸೇರಿದ ಸದಸ್ಯರಾಗಿರುವುದು ಕಂಡುಬಂದಿದ್ದು, ಪ್ರತಿವಾದಿಗಳು ವಾದಿಯು ತನ್ನ ತಂಗಿಯಾಗಿರುತ್ತಾರೆಂದು ಒಪ್ಪಿಕೊಂಡಿರುತ್ತಾರೆ. ಮುಂದುವರೆದು ದಾವಾ ಸ್ವತ್ತುಗಳೆಲ್ಲಾ ವಾದಿ ಮತ್ತು 5, 6 ನೇ ಪ್ರತಿವಾದಿಗಳ ತಂದೆಯಾದ ಎನ್.ಕೆ.ಶ್ರೀನಿವಾಸಭಟ್ ರವರಿಗೆ ಸೇರಿದ ಸ್ವತ್ತುಗಳಾಗಿರುವುದು ಸಹ ನಿರ್ವಿವಾದ ಸಂಗತಿಯಾಗಿದ್ದು, ಸದರಿ ಶ್ರೀನಿವಾಸಭಟ್ ರವರು ದಿಃ09/03/1974 ರಂದು ಮೃತಪಟ್ಟಿರುವ ವಿಚಾರವು ಸಹ ನಿರ್ವಿವಾದ ಸಂಗತಿಯಾಗಿದ್ದು, ಪ್ರತಿವಾದಿಗಳು ಈ ಹಂತದಲ್ಲಿ ಶ್ರೀನಿವಾಸಭಟ್ ರವರು ಮೃತಪಡುವ ಸಮಯದಲ್ಲಿ ಯಾವುದೇ ನೊಂದಾಯಿತ ದಾಖಲಾತಿ ಮೂಲಕ ತಮ್ಮ ಸ್ವತ್ತುಗಳನ್ನು ವಿಕ್ರಯಿಸಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದುದರಿಂದ ಸದರಿ ಶ್ರೀನಿವಾಸಭಟ್ ರವರು ಮೃತಪಟ್ಟ ದಿನಾಂಕದಿಂದಲೇ ಅವರ ವಾರಸುದಾರರುಗಳೆಲ್ಲರಿಗೂ ಆಸ್ತಿಯ ಮೇಲೆ ಹಕ್ಕು ಪ್ರಾಪ್ತವಾಗಿದ್ದು, ಆ ರೀತ್ಯಾ ವಾದಿಗೂ ಸಹ ದಾವಾ ಸ್ವತ್ತುಗಳಲ್ಲಿ ಕಾನೂನು ಬದ್ದ ಭಾಗಾಂಶದ ಹಕ್ಕಿರುತ್ತದೆ. ಮುಂದುವರೆದು ಪ್ರತಿವಾದಿಗಳ ಪರ ಹಾಜರುಪಡಿಸಿದ ದಿಃ21/04/1980 ರ ನೊಂದಾಯಿತ ವಿಭಾಗಪತ್ರವನ್ನು ಪರಿಶೀಲಿಸಿದಾಗ ವಾದಿ ತಾಯಿ ಶಾಂತಲಕ್ಷ್ಮಮ್ಮ, 5 ಮತ್ತು 6 ನೇ ಪ್ರತಿವಾದಿ, ಹಾಗೂ 10 ಮತ್ತು 11 ನೇ ಪ್ರತಿವಾದಿಗಳ ತಂದೆಯಾದ ಕುಮಾರಸ್ವಾಮಿ ರವರ ನಡುವೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದ ಹಾಗೆ ನೊಂದಾಯಿತ ವಿಭಾಗಪತ್ರವಾಗಿರುವುದು ಕಂಡುಬಂದಿರುತ್ತದೆ. ಸದರಿ ವಿಭಾಗಪತ್ರದ ಪ್ರಕಾರ ವಾದಿ ತಾಯಿ ಶಾಂತಲಕ್ಷ್ಮಮ್ಮ ರವರ ಹೆಸರಿಗೆ ಶೃಂಗೇರಿ ತಾಲ್ಲೂಕು, ಸುಂಕದಮಕ್ಕಿ ಗ್ರಾಮದ ಸ.ನಂ.72 ಪಿ ರಲ್ಲಿ 3 ಎಕರೆ 2 ಗುಂಟೆ ಹಾಗೂ ಸ.ನಂ.58 ರಲ್ಲಿ 1 ಎಕರೆ 6 ಗುಂಟೆ ಜಮೀನು ಬಂದಿರುವುದು ಕಂಡುಬಂದಿರುತ್ತದೆ. ಸದರಿ ನೊಂದಾಯಿತ ವಿಭಾಗಪತ್ರದಂತೆ ವಿಭಾಗಪತ್ರದ ಪಕ್ಷಗಾರರು ಸ್ವತ್ತುಗಳನ್ನು ತಮ್ಮ ಹೆಸರಿಗೆ ನೊಂದಣಿ ಮಾಡಿಕೊಂಡು ಸ್ವತ್ತಿನ ಸ್ವಾಧೀನದಲ್ಲಿರುವುದು ಸಹ ಕಂಡುಬಂದಿದ್ದು, ಪ್ರಸ್ತುತ ಒಟ್ಟು ಕುಟುಂಬ ಆಸ್ತಿತ್ವದಲ್ಲಿ ಇಲ್ಲದೇ ಇರುವುದು ಹಾಗೂ ಎಲ್ಲಾ

ಸದಸ್ಯರು ಪ್ರತ್ಯೇಕವಾಗಿ ತಮ್ಮ ಭಾಗಕ್ಕೆ ಬಂದ ಸ್ವತ್ತುಗಳ ಪ್ರತ್ಯೇಕ ಸ್ವಾಧೀನದಲ್ಲಿರುವುದು ಸಹ ಕಂಡುಬಂದಿರುತ್ತದೆ.

12. ಪ್ರತಿವಾದಿಗಳು ಮುಂದುವರೆದು ವಾದಿಯ ತಾಯಿ ತನ್ನ ಹೆಣ್ಣುಮಕ್ಕಳ ಪಾಲಿನ ಆಸ್ತಿಗಾಗಿ ಹೆಚ್ಚಿನ ಭಾಗವನ್ನು ತಮ್ಮಲ್ಲೇ ಇರಿಸಿಕೊಂಡಿರುತ್ತಾರೆ. ವಾದಿಯ ತಾಯಿ ಶಾಂತಲಕ್ಷ್ಮಮ್ಮರವರ ಹೆಸರಿನಲ್ಲಿ ಸ.ನಂ.72/ಪಿ ರಲ್ಲಿ 3 ಎಕರೆ 2 ಗುಂಟೆ ಜಮೀನು ಇದ್ದು, ಸದರಿ ಜಮೀನಿನಲ್ಲಿ ಮಾತ್ರವೇ ವಾದಿಗೆ ಹಕ್ಕಿರುತ್ತದೆ ಎಂದು ಉಳಿದ ದಾವಾ ಸ್ವತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕಿರುವುದಿಲ್ಲವೆಂದು, ಆದುದರಿಂದ ಉಳಿದ ಸ್ವತ್ತುಗಳ ಮೇಲೆ ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಾಗಿರುವುದಿಲ್ಲವೆಂದು ತಕರಾರು ಮಾಡಿರುತ್ತಾರೆ. ಸದರಿ ತಕರಾರಿನ ಹಿನ್ನೆಲೆಯಲ್ಲಿ ಈ ಹಂತದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ವಾದಿಯ ತಾಯಿ ಶಾಂತಲಕ್ಷ್ಮಮ್ಮ ರವರು 1991 ರಲ್ಲಿ ತನ್ನ ಭಾಗಕ್ಕೆ ಬಂದ ಸ್ವತ್ತನ್ನು ಯಾವುದೇ ನೊಂದಾಯಿತ ದಾಖಲಾತಿ ಮೂಲಕ ವಿಕ್ರಯಿಸದೇ ಮೃತಪಟ್ಟಿರುತ್ತಾರೆ. ಆದುದರಿಂದ ವಾದಿಯು ಸೇರಿದಂತೆ ಉಳಿದೆಲ್ಲಾ ವಾರಸುದಾರುಗಳಿಗೆ ಸದರಿ ಶಾಂತಲಕ್ಷ್ಮಮ್ಮ ರವರ ಭಾಗಕ್ಕೆ ಬಂದ ಸ್ವತ್ತಿನಲ್ಲಿ ಸಮಾನವಾದ ಹಕ್ಕಿರುತ್ತದೆ. 6 ನೇ ಪ್ರತಿವಾದಿಯು ಈ ಹಂತದಲ್ಲಿ ಹಾಜರುಪಡಿಸಿರುವ 1994 ರಂದು ಆದ ಕ್ರಯಪತ್ರವನ್ನು ಪರಿಶೀಲಿಸಿದಾಗ 5 ಮತ್ತು 10 ಮತ್ತು 11 ನೇ ಪ್ರತಿವಾದಿಯ ತಂದೆ ಕುಮಾರಸ್ವಾಮಿ ರವರು ವಾದಿಯ ತಾಯಿ ಹೆಸರಿನಲ್ಲಿದ್ದ ಶೃಂಗೇರಿ ತಾಲ್ಲೂಕು, ಸುಂಕದಮಕ್ಕಿ ಗ್ರಾಮದ ಸ.ನಂ.58 ರ ಸ್ವತ್ತನ್ನು ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡು ಮಾರಾಟ ಮಾಡಿರುವುದು ಕಂಡುಬಂದಿರುತ್ತದೆ. ಸದರಿ ಸಂಗತಿಯನ್ನು 5 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿರುವುದಿಲ್ಲ. ಈ ಹಂತದಲ್ಲಿ ವಾದ ಪತ್ರ, ಪ್ರತಿವಾದಿಗಳ ತಕರಾರು ಹಾಗೂ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ವಾದಿಯ ತಾಯಿಯಾದ ಶಾಂತಲಕ್ಷ್ಮಮ್ಮ ರವರು ತಮ್ಮ ಹೆಣ್ಣು ಮಕ್ಕಳ ಪಾಲಿಗೆ ಬರುವ ಹಿಸ್ಸೆಯನ್ನು ಸೇರಿಸಿ, ತನ್ನ ಭಾಗಕ್ಕೆ ಹಿಸ್ಸೆಯನ್ನು ನೊಂದಾಯಿತ ವಿಭಾಗಪತ್ರದ ಮೂಲಕ ಪಡೆದುಕೊಂಡಿದ್ದು, ಸದರಿ ಆಸ್ತಿಗಳ ಮೇಲೆ ವಾದಿಗೆ ಕಾನೂನು ಬದ್ದ ಭಾಗಾಂಶವನ್ನು ಪಡೆಯುವ ಹಕ್ಕಿರುತ್ತದೆ. ಈಗಾಗಲೇ 5 ನೇ ಪ್ರತಿವಾದಿ ಹಾಗೂ 10 ಮತ್ತು 11 ನೇ ಪ್ರತಿವಾದಿಗಳ ತಂದೆ ತಮ್ಮ ತಾಯಿಯ ಹೆಸರಿನಲ್ಲಿದ್ದ ಸ.ನಂ.58 ರ ಜಮೀನನ್ನು ತಮ್ಮ

ಹೆಸರುಗಳಿಗೆ ಖಾತೆ ಬದಲಾವಣೆ ಮಾಡಿಕೊಂಡು ಮಾರಾಟ ಮಾಡಿರುತ್ತಾರೆ. ಒಂದು ವೇಳೆ ವಾದಿಯ ಪರವಾಗಿ ದಾವಾ ಐಟಂ ನಂ.1 ರ ಮೇಲೆ ಮಧ್ಯಂತರ ಆದೇಶ ಮಾಡದೇ ಹೋದಲ್ಲಿ ಸದರಿ ಸ್ವತ್ತನ್ನು ಸಹ ಪ್ರತಿವಾದಿಗಳು ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡು ಮಾರಾಟ ಮಾಡಿ ವಾದಿಯ ಕಾನೂನು ಬದ್ದ ಹಕ್ಕನ್ನು ತಪ್ಪಿಸುವ ಸಾಧ್ಯತೆ ಇರುವುದು ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ. ದಾವಾ ಐಟಂ ನಂ.1 ನ್ನು ಹೊರತುಪಡಿಸಿ ಉಳಿದ ಸ್ವತ್ತುಗಳು ಈಗಾಗಲೇ ನೊಂದಾಯಿತ ವಿಭಾಗಪತ್ರದ ಮೂಲಕ ಸದರಿ ಭಾಗದ ಹಿಸ್ಸೆದಾರರ ಹೆಸರಿಗೆ ಖಾತೆ ಬದಲಾವಣೆ ಆಗಿದ್ದು, ಸದರಿ ಹಿಸ್ಸಾದಾರರುಗಳು ಪ್ರಸ್ತುತ ಪ್ರತ್ಯೇಕವಾಗಿ ಸ್ವಾಧೀನದಲ್ಲಿರುವುದು ಕಂಡುಬಂದಿರುವುದರಿಂದ ಸದರಿ ಸ್ವತ್ತುಗಳ ಮೇಲೆ ವಾದಿಯು ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ಹಾಗೂ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವ ಇತರೆ ಅಂಶಗಳು ಈ ಹಂತದಲ್ಲಿ ಇತ್ಯರ್ಥಪಡಿಸಲು ಸಾಧ್ಯವಿರುವುದಿಲ್ಲ. ಅದಕ್ಕಾಗಿ ದಾವೆಯಲ್ಲಿ ಉಭಯಪಕ್ಷಗಾರರ ಸುದೀರ್ಘ ವಿಚಾರಣೆಯಾಗಬೇಕಾಗುತ್ತದೆ. ಮುಂದುವರೆದು 5 ಮತ್ತು 6 ನೇ ಪ್ರತಿವಾದಿಗಳು ತಮ್ಮ ಹೆಸರಿನಲ್ಲಿರುವ ಪ್ರತ್ಯೇಕ ಸ್ವಾಧೀನ ಹೊಂದಿರುವ ಜಮೀನುಗಳನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿರುವುದಿಲ್ಲ ಹಾಗೂ ಆ ರೀತಿಯ ಯಾವುದೇ ಉದ್ದೇಶವಿರುವುದಿಲ್ಲವೆಂದು ತಮ್ಮ ಪ್ರತಿವಾದ ಪತ್ರದಲ್ಲಿ ನಮೂದಿಸಿದ್ದು, ಪ್ರತಿವಾದಿಗಳು ತಮ್ಮ ಭಾಗಕ್ಕೆ ಬಂದ ಸ್ವತ್ತುಗಳನ್ನು ಮಾರಾಟ ಮಾಡಲು ಪ್ರಯತ್ನಿಸಿರುತ್ತಾರೆ ಎನ್ನುವ ಅಂಶವನ್ನು ಈ ಹಂತದಲ್ಲಿ ವಾದಿಯು ಸಾಭೀತುಪಡಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ಹಂತದಲ್ಲಿ ದಾವಾ ಐಟಂ ನಂ.1 ರ ಮೇಲೆ ಮಧ್ಯಂತರ ಆದೇಶ ಹೊರಡಿಸದಿದ್ದಲ್ಲಿ ವಾದಿಗೆ ಸದರಿ ಸ್ವತ್ತುಗಳಲ್ಲಿರುವ ಕಾನೂನುಬದ್ದ ಹಕ್ಕನ್ನು ತಪ್ಪಿಸಲು ಮಾರಾಟ ಮಾಡುವ ಅಥವಾ ಸದರಿ ಸ್ವತ್ತುಗಳ ಮೇಲೆ 3 ನೇ ವ್ಯಕ್ತಿಗೆ ಆದಾರ ಮಾಡುವ ಸಾಧ್ಯತೆಯು ಕಂಡುಬಂದಿದ್ದು, ಮೇಲ್ನೋಟಕ್ಕೆ ದಾವೆಯು ವಾದಿಯ ಪರವಾಗಿದ್ದು, ಅನುಕೂಲತೆಯ ಒಲವು ಸಹ ವಾದಿಯ ಪರವಾಗಿದ್ದು, ಒಂದು ವೇಳೆ ದಾವಾ ಐಟಂ ನಂ.1 ರ ಮೇಲೆ ಮಧ್ಯಂತರ ಆದೇಶ ಮಾಡದೇ ಹೋದಲ್ಲಿ ವಾದಿಗೆ ತುಂಬಲಾರದ ನಷ್ಟ ಉಂಟಾಗುವುದು ಕಂಡುಬಂದ ಕಾರಣ ಅಂಶ ಸಂಖ್ಯೆಗಳು 1 ರಿಂದ 3 ನ್ನು ಭಾಗಶಃ ಸಕರಾತ್ಮಕವಾಗಿ ಉತ್ತರಿಸಲಾಗಿದೆ.

13. **<u>ಅಂಶ ಸಂಖ್ಯೆ 4</u>**: ಮೇಲ್ಕಂಡಂತೆ ಅಂಶ ಸಂಖ್ಯೆಗಳು 1 ರಿಂದ 3 ರಮೇಲೆ ಚರ್ಚಿಸಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಹಾಗೂ ಕಲಂ 151 ರ ಪ್ರಕಾರ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಭಾಗಶಃ ಪುರಸ್ಕರಿಸಲಾಗಿದೆ.

ಪ್ರಸ್ತುತ ದಾವೆ ಇತ್ಯರ್ಥವಾಗುವವರೆಗೂ ಪ್ರತಿವಾದಿಗಳೇ ಆಗಲಿ, ಪ್ರತಿವಾದಿಗಳ ಪರ ಅನುಯಾಯಿಗಳಾಗಲಿ, ದಾವಾ ಐಟಂ ನಂ.1 ರ ಸ್ವತ್ತನ್ನು 3 ನೇ ವ್ಯಕ್ತಿಗಳಿಗೆ ಮಾರಾಟ, ಪರಬಾರೆ, ವಗೈರೆ ಮಾಡದಂತೆ ಹಾಗೂ ದಾವಾ ಐಟಂ ನಂ.1 ರ ಸ್ವತ್ತಿನ ಮೇಲೆ ಯಾವುದೇ ಸಾಲವನ್ನು ಮಾಡದಂತೆ ಈ ಮೂಲಕ ತಾತ್ಕಾಲಿಕವಾಗಿ ನಿರ್ಬಂದಿಸಲಾಗಿದೆ.

(ಈ ಅರ್ಜಿಯನ್ನು ಶೀಘ್ರಲಿಪಿಗಾರ್ತಿಗೆ ನೇರವಾಗಿ ಉಕ್ತಲೇಖನ ನೀಡಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 9 ನೇ ದಿವಸ ನವೆಂಬರ್ ಮಾಹೆ 2018 ರಂದು ನಾನು ಘೋಷಿಸಿರುತ್ತೇನೆ.)

ಸಹಿ/-
**(ಸೂರ್ಯನಾರಾಯಣ ಎಸ್.)**
**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಶೃಂಗೇರಿ.**